ADVT

# ಭವಿಷ್ಯದ ನಿರ್ಮಾಪಕರು

## ಬೆಂಗಳೂರಿನಲ್ಲಿ ಪ್ರಾರಂಭವಾಗಿರುವ ಫೋರ್ಟಿಸ್ ಆಸ್ಪತ್ರೆಯ ಹೊಸ ಐವಿಎಫ್ ಕೇಂದ್ರ ಅನೇಕ ವಿವಾಹಿತ ದಂಪತಿಗಳಿಗೆ ಆಶಾಕಿರಣವಾಗಲಿದೆ



ಫೋರ್ಟಿಸ್, ಆರೋಗ್ಯ ರಕ್ಷಣಾ ಸೇವೆಗಳನ್ನು ಒದಗಿಸುವುದರಲ್ಲಿ ಮುಂಚೂಣಿಯಲ್ಲಿರುವ ಒಂದು ಪ್ರಖ್ಯಾತ ಹೆಸರು. ಈಗ ಅದು ತನ್ನ ಗ್ರಾಹಕರಿಗೆ ಮತ್ತೊಂದು ವಿಶೇಷ ಸೇವೆ ಒದಗಿಸುತ್ತಿದೆ. ಅದೇ ಕ್ರಿಯೇಷನ್(ಸೃಷ್ಟಿ), ಇದು ಬಂಜೆತನಕ್ಕೆ ಮತ್ತು ನೆರವಿನೊಂದಿಗಿನ ಗರ್ಭಧಾರಣೆಗೆ ಸಮಗ್ರ ಚಿಕಿತ್ಸೆ ನೀಡುವ ಒಂದು ಕೇಂದ್ರ. ಬನ್ನೇರುಘಟ್ಟದಲ್ಲಿರುವ ಈ ಹೊಸ ಐವಿಎಫ್ ಕೇಂದ್ರವು ಫೋರ್ಟಿಸ್ ಮಹಿಳಾ ಮತ್ತು ಶಿಶು ಆರೈಕೆ ಕಾರ್ಯಕ್ರಮದ ಭಾಗ. ಇದು ಫಲವಂತಿಕೆ ಹಾಗು ಕನಿಷ್ಠ ಪ್ರವೇಶ ಶಸ್ತ್ರಚಿಕಿತ್ಸಾ ವಿಧಾನಗಳಿಗೆಂದೆ ಮೀಸಲಾಗಿರುವ ಕೇಂದ್ರವಾಗಿದೆ. ಇಲ್ಲಿ ತಜ್ಞರ ಒಂದು ದೊಡ್ಡ ತಂಡವೇ ಇದೆ, ಈ ಕೇಂದ್ರವು ತನ್ನ ಗ್ರಾಹಕರಿಗೆ (ರೋಗಿಗಳಿಗೆ) ಅವರವರಿಗೆ ಕರಾರುವಾಕ್ಕಾಗಿ ಸರಿಹೋಗುವ ಪರಿಹಾರಗಳನ್ನೇ ನೀಡುತ್ತದೆ, ಇದರಿಂದಾಗಿ ಜನನ ಹಾಗೂ ಬಂಜೆತನಕ್ಕೆ ಸಂಬಂಧಿಸಿದ ಎಲ್ಲ ಸಮಸ್ಯೆಗಳಿಗೂ ಸಮರ್ಥವಾದ ಪರಿಹಾರಗಳು ಇಲ್ಲಿ ದೊರೆಯುತ್ತವೆ. ತಂಡದ ನಾಯಕರು ಡಾ. ಮನೀಶಾ ಸಿಂಗ್ ಮತ್ತು ಡಾ. ಜೋಷುವ ಪೀಟರ್, ಇವರಿಬ್ಬರೂ ಬಂಜೆತನ ಹಾಗೂ ನೆರವಿನೊಂದಿಗಿನ ಗರ್ಭಧಾರಣೆ ವಿಷಯಗಳಲ್ಲಿ ಅಪಾರ ಅನುಭವಿಗಳು. ಹಲವಾರು ಆರೋಗ್ಯ ಸಂಬಂಧಿತ ವಿಷಯಗಳ ಮತ್ತು ಜೀವನಶೈಲಿಗಳ ಏರುಪೇರುಗಳಿಂದಾಗಿ ಇಂದಿನ ದಿನಗಳಲ್ಲಿ ಬಂಜೆತನ ಹೆಚ್ಚಾಗುತ್ತಿದ್ದು, ಇದರೆಡೆಗೆ ಗಮನ ಹರಿಸುವುದು ಬಹುಮುಖ್ಯವಾಗಿದೆ. ಹಾಗಾಗಿ, ವೈದ್ಯಕೀಯ ನಿಪುಣತೆ ಮತ್ತು ಅತ್ಯಾಧುನಿಕ ತಂತ್ರಜ್ಞಾನಗಳುಳ್ಳ ಕ್ರಿಯೇಷನ್ ನಂತಹ ಸಮಗ್ರ ಘಟಕ ಅತ್ಯಾವಶ್ಯಕವಾಗಿತ್ತು, ಇದರಿಂದಾಗಿ ರೋಗಿಗಳಿಗೆ ಶಿಶುಜನನದ ಆನಂದ ಲಭಿಸಲಿದೆ.



'ವಿಶ್ವದಾದ್ಯಂತ ಅಂದಾಜು ಶೇ. 10 ರಷ್ಟು ವಿವಾಹಿತ ದಂಪತಿಗಳು ಬಂಜೆತನದಿಂದ ಬಳಲುತ್ತಿದ್ದಾರೆ, ಭಾರತದಲ್ಲಿ ಇವರ ಸಂಖ್ಯೆ ಶೇ. 8–10. ಈ ಸಂಖ್ಯೆಗಳು ವಿಪರೀತವಾಗಿ ಹೆಚ್ಚುತ್ತಿದೆ. ಹಾಗಾಗಿ ಸಾಕ್ಷ್ಯಾಧಾರಿತ ಚಿಕಿತ್ಸೆ ನೀಡುವ ದೇಶೀಯವಾಗಿ ನಿರ್ವಹಿಸಲ್ಪಡುತ್ತಿರುವ ಫಲವಂತಿಕೆಯ ಕೇಂದ್ರಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಅತ್ಯಂತ ಪ್ರತಿಭಾವಂತ ವೈದ್ಯರನ್ನು ಹೊಂದಿರುವ ಫೋರ್ಟಿಸ್ ಈ ಕೊರತೆಯನ್ನು ನೀಗಿಸಲು ಪ್ರಯತ್ನಿಸುತ್ತಿದೆ. ಕ್ರಿಯೇಷನ್, ಅಸಂಖ್ಯಾತ ದಂಪತಿಗಳ ಮತ್ತು ಅವರ ಕುಟುಂಬಗಳ ಬಾಳಿನಲ್ಲಿ ಬೆಳಕನ್ನು ತರಲು ಉದ್ದೇಶಿಸಿದೆ,' ಎಂದರು ಶ್ರೀ ಪಿ ಡೇವಿಸನ್, ಅಸೋಸಿಯೇಟ್ ವೈಸ್ ಪ್ರೆಸಿಡೆಂಟ್, ಫೋರ್ಟಿಸ್ ಆಸ್ಪತ್ರೆಗಳು, ಬೆಂಗಳೂರು.

'ಕ್ರಿಯೇಷನ್‌ನಲ್ಲಿ ದಂಪತಿಗಳು ಎಲ್ಲ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗಳಲ್ಲೂ ಸಂಪೂರ್ಣವಾಗಿ ಭಾಗವಹಿಸುತ್ತಾರೆ. ಅವರಿಗೆ ಒಂದು ಪರಿಪೂರ್ಣ ಪರಿಹಾರವನ್ನು ಒದಗಿಸಲಾಗುತ್ತದೆ. ಜೊತೆಗೆ ನಾವು ಜಾಗತಿಕವಾಗಿ ಅತ್ಯಂತ ಶ್ರೇಷ್ಠವಾದ ಗುಣಮಟ್ಟಗಳುಳ್ಳ ಮಾನದಂಡಗಳನ್ನು, ಅಂತರರಾಷ್ಟ್ರೀಯವಾಗಿ ಸ್ವೀಕೃತವಾಗಿರುವ ಶಿಷ್ಟಾಚಾರಗಳನ್ನು ಅನುಸರಿಸುತ್ತೇವೆ; ಇದರಲ್ಲಿ ಬ್ಲ್ಯಾಸ್ಟೋ–ಸಿಸ್ಟ್ ಹಂತದಲ್ಲಿ ಭ್ರೂಣ ವರ್ಗಾವಣೆ ಕೂಡ ಸೇರಿದೆ,' ಎಂದರು ಡಾ. ಮನೀಶಾ ಸಿಂಗ್, ಸಲಹಾತ್ಮಕ ಸ್ತ್ರೀರೋಗಶಾಸ್ತ್ರ ತಜ್ಞರು ಮತ್ತು ಉತ್ಪಾದನಾ ಔಷಧಗಳ ಹಾಗೂ ಶಸ್ತ್ರಚಿಕಿತ್ಸೆಯ ಸಹಾಯಕ ವಿಶೇಷಜ್ಞರು, ಮತ್ತು ಡಾ. ಜೋಷುವ ಪೀಟರ್, ಸಲಹಾತ್ಮಕ, ನೆರವಿನ ಉತ್ಪಾದನಾ ಜೀವಶಾಸ್ತ್ರಜ್ಞರು.



**ಡಾ. ಮನೀಶಾ ಸಿಂಗ್**

ಕ್ರಿಯೇಷನ್‌ನಲ್ಲಿ ಗ್ರಾಹಕರು ಅನೇಕ ಸೇವೆಗಳನ್ನು ಪಡೆಯಬಹುದು; ಪ್ರಾಥಮಿಕ ಬಂಜೆತನ ನಿರ್ಣಯ, ಶ್ರೋಣಿ ರೋಗವಿಜ್ಞಾನ (ರೋಗಗ್ರಂಥಿ, ಗರ್ಭ ಅಪಸ್ಥಾನೀಯ, ಇತ್ಯಾದಿ) ಶಸ್ತ್ರಚಿಕಿತ್ಸೆ, ಗರ್ಭಾಶಯದೊಳಗೇ ಗರ್ಭದಾನ (ಇಂಟ್ರಾ ಯುಟೆರಿನ್ ಇನ್ಸೆಮಿನೇಷನ್), ದಾನಿಯ ವೀರ್ಯಾಣುವಿನಿಂದ ಗರ್ಭದಾನ, ಇನ್–ವಿಟ್ರೊ ಫರ್ಟಿಲೈಸೇಷನ್ – ಐವಿಎಫ್ (ಅಂಡವನ್ನು ಹೊರಗೆ ಫಲಿತಗೊಳಿಸಿ ಗರ್ಭದಲ್ಲಿಡುವುದು), ಬ್ಲ್ಯಾಸ್ಟೊಸಿಸ್ಟ್ ವರ್ಗಾವಣೆ, Egg ದಾನ, ಭ್ರೂಣ ದಾನ, ಮತ್ತು ಶಸ್ತ್ರಚಿಕಿತ್ಸೆಯ ಮೂಲಕ ಪುರುಷರಲ್ಲಿ ಇಂಟ್ರಾ–ಸೈಟೊ–ಪ್ಲಾಸ್ಮಿಕ್ ಸ್ಪರ್ಮ್ ಇಂಜೆಕ್ಷನ್ ಮೂಲಕ ವೀರ್ಯವನ್ನು ಪುನಃ ಉತ್ಪಾದಿಸುವುದು (ಐಸಿಎಸ್ಐ ಕಾರ್ಯವಿಧಾನ).

**ಕ್ರಿಯೇಷನ್‌ನ ವಿಶಿಷ್ಟ ಲಕ್ಷಣಗಳು:**

- ಸಮಗ್ರವಾದ ವಿಮರ್ಶೆ
- ಸಾಕ್ಷಿ ಮತ್ತು ನಿಪುಣತೆಗಳ ಆಧಾರದ ಮೇಲೆ ಸಲಹೆ ಹಾಗೂ ನಿರ್ವಹಣೆ.
- ಹೊರರೋಗಿ ಚಿಕಿತ್ಸೆಗೆ ಒಂದೇ ಒಂದು ಪೂರ್ವನಿಗದಿ (ಅಪಾಯಿಂಟ್ಮೆಂಟ್) ಸಾಕು




creation
INFERTILITY AND ASSISTED REPRODUCTION CENTRE

ಫೋರ್ಟಿಸ್ ಆಸ್ಪತ್ರೆ, 154/9, ಬನ್ನೇರುಘಟ್ಟ ರಸ್ತೆ, ಐಐಎಮ್–ಬಿ ಎದುರು, ಬೆಂಗಳೂರು – 560 076.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 6621 4281 / 96633 67253 | ಎಸ್ಎಂಎಸ್: 'Fortis' ಎಂದು 58558 ಕ್ಕೆ.

ಇ–ಮೇಲ್: askdoctor@fortisfertilitycentre.com | ವೆಬ್ ಸೈಟ್: www.fortisfertilitycentre.com